<u>**ಕರ್ನಾಟಕ ವಿಧಾನ ಪರಿಷತ್ತು**</u>

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 1019 (891) |
| ಸದಸ್ಯರ ಹೆಸರು : | **ಶ್ರೀ ಆರ್. ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** |
| ಉತ್ತರಿಸಬೇಕಾದ ದಿನಾಂಕ: | 19.12.2018. |
| ಉತ್ತರಿಸುವ ಸಚಿವರು : | ಗಣಿ ಮತ್ತು ಭೂವಿಜ್ಞಾನ ಹಾಗೂ ಮುಜರಾಯಿ ಸಚಿವರು |

| ಕ್ರ. ಸಂ. | **ಪ್ರಶ್ನೆ** | **ಉತ್ತರ** |
|---|---|---|
| ಅ. | ಶಿವಮೊಗ್ಗ ಜಿಲ್ಲೆಯಲ್ಲಿ ಹೇರಳವಾಗಿ ಮರಳು ಇದ್ದರೂ ಸಹ ಸಾರ್ವಜನಿಕರಿಗೆ ಮರಳು ಸಿಗದೆ ತೊಂದರೆ ಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಆ. | ಶಿವಮೊಗ್ಗ ಜಿಲ್ಲೆಯಲ್ಲಿ ಎಷ್ಟು ಬ್ಲಾಕ್‌ಗಳಿಂದ ಮರಳನ್ನು ತೆಗೆಯಲಾಗುತ್ತಿದೆ; ದಿನಕ್ಕೆ ಎಷ್ಟು ಮರಳು ಪೂರೈಸಲಾಗುತ್ತಿದೆ; | ಶಿವಮೊಗ್ಗ ಜಿಲ್ಲೆಯ ತುಂಗ, ತುಂಗಭದ್ರಾ, ಮಾಲತಿ, ಶರಾವತಿ ಮತ್ತು ಹರಿದ್ರಾವತಿ ನದಿ ಪಾತ್ರಗಳಲ್ಲಿ ಒಟ್ಟು **98** ಮರಳು ಬ್ಲಾಕ್‌ಗಳನ್ನು ಗುರುತಿಸಲಾಗಿರುತ್ತದೆ. ಸದರಿ ಮರಳು ಬ್ಲಾಕ್‌ಗಳಲ್ಲಿ **53** ಮರಳು ಬ್ಲಾಕ್‌ಗಳು ಪಶ್ಚಿಮ ಘಟ್ಟ, ಪರಿಸರ ಸೂಕ್ಷ್ಮ ಪ್ರದೇಶ ಹಾಗೂ ವನ್ಯ ಜೀವಿಧಾಮಗಳ ಬಫರ್ ಜೋನ್ ವ್ಯಾಪ್ತಿಗೆ ಬರುವ ಕಾರಣ ರಾಜ್ಯ ಪರಿಸರ ಆಘಾತ ಅಂದಾಜೀಕರಣ ಪ್ರಾಧಿಕಾರದಿಂದ ಪರಿಸರ ವಿಮೋಚನಾ ಪತ್ರ ನೀಡಿರುವುದಿಲ್ಲ. ಉಳಿದ **45** ಮರಳು ಬ್ಲಾಕ್‌ಗಳಿಗೆ ಪರಿಸರ ವಿಮೋಚನಾ ಪತ್ರ ದೊರೆತಿದ್ದು, ಸದರಿ ಮರಳು ಬ್ಲಾಕ್‌ಗಳು ಮಾತ್ರ ಮರಳು ಗಣಿಗಾರಿಕೆ ನಡೆಸಲು ಮುಕ್ತವಾಗಿರುತ್ತವೆ.<br><br>ಶಿವಮೊಗ್ಗ ಜಿಲ್ಲೆಯಲ್ಲಿ ಒಟ್ಟು **28** ಮರಳು ಬ್ಲಾಕ್‌ಗಳಿಗೆ ಮರಳು ಗಣಿಗಾರಿಕೆ ನಡೆಸಲು ಮಂಜೂರಾತಿ ನೀಡಲಾಗಿರುತ್ತದೆ. ಪ್ರಸ್ತುತ **11** ಮರಳು ಬ್ಲಾಕ್‌ಗಳಲ್ಲಿ ಕಾರ್ಯ ಪ್ರಾರಂಭಗೊಂಡಿದ್ದು, ದಿನಾಂಕ: 20.11.2018 ರಿಂದ 11.12.2018 ರವರೆಗೆ **4794 ಮೆ.ಟನ್.** ಮರಳನ್ನು ಸಾರ್ವಜನಿಕ ಮತ್ತು ಸರ್ಕಾರಿ ಕಾಮಗಾರಿಗಳಿಗೆ ಪೂರೈಸಲಾಗಿರುತ್ತದೆ. ಪ್ರತಿ ದಿನ ಸರಾಸರಿ ಅಂದಾಜು **500 ಮೆ.ಟನ್.** ಮರಳನ್ನು ಜಿಲ್ಲೆಗೆ ಪೂರೈಕೆ ಮಾಡಲಾಗಿರುತ್ತದೆ. |
| ಇ. | ಮರಳು ಗಣಿಗಾರಿಕೆ ಮಾಡುವಾಗ ಸರ್ಕಾರ ವಿಧಿಸಿರುವ ಷರತ್ತುಗಳನ್ನು ಗುತ್ತಿಗೆದಾರರು ಪೂರೈಸಿರುತ್ತಾರೆಯೇ; ಷರತ್ತುಗಳ ಉಲ್ಲಂಘನೆ ಮಾಡಿ ಅಕ್ರಮ ಮರಳುಗಾರಿಕೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಮರಳು ಹೇರಳವಾಗಿ ಲಭ್ಯವಿದ್ದರೂ ಮರಳಿನ ಕೃತಕ ಅಭಾವದಿಂದ ನಾಗರೀಕರಿಗೆ ಹೆಚ್ಚಿನ ದರದಲ್ಲಿ ಖರೀದಿ ಮಾಡಬೇಕಾದಂತಹ ಪರಿಸ್ಥಿತಿ ಬಂದಿರುವುದರಿಂದ ನಾಗರೀಕರಿಗೆ ಸರ್ಕಾರ | ಸರ್ಕಾರದ ಗಮನಕ್ಕೆ ಬಂದಿದೆ.<br>ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮ ದಿನಾಂಕ: 12.08.2016ರ ನಿಯಮ 31-Y ರ ಪ್ರಕಾರ ಮರಳು ಗುತ್ತಿಗೆ ಮಂಜೂರು ಪಡೆದ ಯಶಸ್ವಿ ಬಿಡ್‌ದಾರರು ಮರಳು ಗಣಿಗಾರಿಕೆ ನಡೆಸಿ ತೆಗೆಯಲಾದ ಮರಳನ್ನು ಸ್ಟಾಕ್ ಯಾರ್ಡ್ ನಿರ್ಮಾಣ ಮಾಡಿಕೊಂಡು, ಸ್ಟಾಕ್ ಯಾರ್ಡ್‌ಗಳಲ್ಲಿ ಸಂಗ್ರಹಿಸಿ ವೇ ಬ್ರಿಡ್ಜ್, ಸಿ.ಸಿ. ಟಿ.ವಿ ಕ್ಯಾಮರಾ, ಜಿಯೋ ಫೆನ್ಸಿಂಗ್ ಇತ್ಯಾದಿ ಸೌಕರ್ಯಗಳನ್ನು ಕಲ್ಪಿಸಿಕೊಂಡು ಮರಳು ಸಾಗಾಣಿಕೆಗೆ ಬಲ್ಕ್ ಪರವಾನಿಗೆ ಪಡೆದುಕೊಂಡು ಜಿ.ಪಿ.ಎಸ್. ಅಳವಡಿಸಿರುವ ಮರಳು ಸಾಗಾಣಿಕೆ ವಾಹನಗಳಿಗೆ ಮಾತ್ರ ಮರಳು ಸಾಗಾಣಿಕೆ ಪರವಾನಿಗೆ ನೀಡಲು ಗುತ್ತಿಗೆದಾರರುಗಳಿಗೆ ಸೂಚನೆ ನೀಡಲಾಗಿರುತ್ತದೆ. ಅದರಂತೆ ಜಿಲ್ಲೆಯಲ್ಲಿ ಗುತ್ತಿಗೆದಾರರು ಮರಳನ್ನು ಸಾಗಾಣಿಕೆ ಮಾಡುತ್ತಿದ್ದಾರೆ. |

| | | |
|---|---|---|
| | ನಿಗದಿ ಮಾಡಿರುವ ದರದಲ್ಲಿ ಮರಳನ್ನು ಪೂರೈಸಲು ಸಂಬಂಧಪಟ್ಟ ಗಣಿಗಾರಿಕೆ ಇಲಾಖೆಯವರಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗುವುದೇ; | ತೀರ್ಥಹಳ್ಳಿ ತಾಲ್ಲೂಕಿನ ಹುಣಸವಳ್ಳಿ ಗ್ರಾಮದ ಮರಳು ಬ್ಲಾಕ್ ಸಂಖ್ಯೆ **02** ರಲ್ಲಿ ಷರತ್ತು ಉಲ್ಲಂಘನೆ ಮಾಡಿ, ಅಂದಾಜು **2000** ಮೆ.ಟನ್ ಮರಳು ಅಕ್ರಮವಾಗಿ ಸಂಗ್ರಹಣೆ ಮಾಡಿದ್ದ ಹಿನ್ನೆಲೆಯಲ್ಲಿ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ–1994 ನಿಯಮ 44 (3) ಮತ್ತು 44(2) ರಂತೆ ಒಟ್ಟು **ರೂ.7,70,000/–** ಗಳ ರಾಜಧನ ದಂಡವನ್ನು ವಿಧಿಸಿ ಕಾನೂನಿನಂತೆ ಕ್ರಮ ಕೈಗೊಳ್ಳಲಾಗಿದೆ. ಸದರಿ ಮರಳನ್ನು ಸಾಗಾಣಿಕೆ ಮಾಡದೇ ಸ್ಟಾಕ್‌ಯಾರ್ಡ್‌ನಲ್ಲಿ ಯಥಾ ಸ್ಥಿತಿಯಲ್ಲಿರಿಸುವಂತೆ ಗುತ್ತಿಗೆದಾರರಿಗೆ ನೋಟಿಸ್ ಜಾರಿಗೊಳಿಸಲಾಗಿರುತ್ತದೆ.<br><br>2017–18 ನೇ ಸಾಲಿನಲ್ಲಿ ಮರಳು ಗುತ್ತಿಗೆಗಳು ಕಡಿಮೆ ಇದ್ದ ಕಾರಣ ಜಿಲ್ಲೆಯಲ್ಲಿ ಮರಳು ಕೊರತೆ ಇತ್ತು. ಆದರೆ ಪ್ರಸಕ್ತ ಸಾಲಿನಲ್ಲಿ ಜಿಲ್ಲಾ ಮರಳು ಉಸ್ತುವಾರಿ ಸಮಿತಿಯು ಮರಳು ವಿತರಣೆಗೆ ಸಂಬಂಧಿಸಿದಂತೆ, ಸೂಕ್ತ ಕ್ರಮ ಕೈಗೊಂಡಿರುತ್ತದೆ. ಗುತ್ತಿಗೆದಾರರುಗಳಿಗೆ ಹಾಗೂ ಸಾರ್ವಜನಿಕರಿಗೂ ಹೊರೆಯಾಗದಂತೆ, ಗುತ್ತಿಗೆ ನಿರ್ವಹಣೆ, ಮರಳು ಉತ್ಪಾದನೆ, ಜರಡಿ ಹಿಡಿಯುವುದು ಸೇರಿದಂತೆ ಸಂಭವಿಕ ಎಲ್ಲಾ ವೆಚ್ಚಗಳು ಹಾಗೂ ಗುತ್ತಿಗೆದಾರರ ಲಾಭಾಂಶದ ಮೊತ್ತ ಸೇರಿ ಒಂದು ಮೆಟ್ರಿಕ್ ಟನ್‌ಗೆ **ರೂ. 300/–** ಗಳಿಗೆ ನಿಗದಿಪಡಿಸಲು ಮರಳು ಉಸ್ತುವಾರಿ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ.<br><br>ಗುತ್ತಿಗೆದಾರರುಗಳು ಸರ್ಕಾರಕ್ಕೆ ಪಾವತಿ ಮಾಡಬೇಕಾದ ಶುಲ್ಕಗಳನ್ನು ಹೊರತುಪಡಿಸಿ **ರೂ.3000/–** ಗಳನ್ನು ಮಾತ್ರ ಪಾವತಿ ಮಾಡಬೇಕಾಗಿರುತ್ತದೆ. ಎಲ್ಲಾ ಗುತ್ತಿಗೆಗಳಲ್ಲಿ ಸರಾಸರಿ **ರೂ. 10,000/–** ದರಕ್ಕೆ ಮರಳು ದೊರಕಲಿದ್ದು, ಕಡ್ಡಾಯವಾಗಿ ಇದೇ ದರದಲ್ಲಿ ಸಾರ್ವಜನಿಕರಿಗೆ ಮರಳು ವಿತರಿಸಲು ಸೂಚಿಸಲಾಗಿರುತ್ತದೆ. ತಪ್ಪಿದಲ್ಲಿ ನಿಯಮಾನುಸಾರ ಮುಂದಿನ ಕಠಿಣ ಕ್ರಮ ಜರುಗಿಸಲಾಗುವುದು ಎಂದು ತಿಳಿಸಲಾಗಿದ್ದು, ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ಮರಳು ನೀಡಲು ಕ್ರಮ ವಹಿಸಲಾಗಿದೆ. |
| ಈ. | ಸರ್ಕಾರ ವಿಧಿಸಿರುವ ಷರತ್ತುಗಳನ್ನು ನಿರ್ವಹಿಸುವಂತೆ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಗಣಿಗಾರಿಕೆ ಅಧಿಕಾರಿಗಳು ವಿಫಲವಾಗಿರುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ? | ಸರ್ಕಾರವು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ 1994ಕ್ಕೆ ದಿನಾಂಕ: 12.08.2016 ರಂದು ತರಲಾದ ಷರತ್ತುಗಳನ್ವಯ ಜಿಲ್ಲೆಯಲ್ಲಿ ಮರಳು ಗುತ್ತಿಗೆಗಳನ್ನು ಮಂಜೂರು ಮಾಡಲಾಗಿರುತ್ತದೆ. ಅದರಂತೆ ಜಿಲ್ಲೆಯಲ್ಲಿ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಮರಳು ಗಣಿಗಾರಿಕೆಗೆ ಸಂಬಂಧಪಟ್ಟಂತೆ ಅಧಿಕಾರಿಗಳು ಕಾರ್ಯ ನಿರ್ವಹಿಸಲು ವಿಫಲವಾಗಿರುವ ಬಗ್ಗೆ ಯಾವುದೇ ದೂರುಗಳು ದಾಖಲಾಗಿರುವುದಿಲ್ಲ. |

ಸಂಖ್ಯೆ: ಸಿಐ 483 ಎಂಎಂಎನ್ 2018

**(ರಾಜಶೇಖರ ಬಿ. ಪಾಟೀಲ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ಮುಜರಾಯಿ ಸಚಿವರು